# ಶ್ರೀಮಾತೆಯವರ ಮಾನವೀಯತೆ

ಡಾ.ಎಚ್. ಪಾಂಡುರಂಗ ವಿಠಲ

*ಆಸ್ತಿಕ ನಾಸ್ತಿಕರೆಲ್ಲರನ್ನೂ ಸಮನಾಗಿ ತಟ್ಟುವ ಗುಣ ಮಾನವೀಯತೆ. ಶ್ರೀಮಾತೆಯವರ ಬದುಕೇ ಮಾನವೀಯತೆಯ ಒಂದು ಅದ್ಭುತ ಅಭಿವ್ಯಕ್ತಿಯ ಗಾಥೆ. ಶ್ರೀಮಾತೆಯವರ ವ್ಯಕ್ತಿತ್ವದಲ್ಲಿನ ಮಾನವೀಯತೆಯ ಮುಖದ ಸೂಕ್ಷ್ಮ ಪರಿಚಯ ನೀಡಿರುವ ಡಾ.ಪಾಂಡುರಂಗ ವಿಠಲ ಅವರು ಮೈಸೂರಿನ ಸದ್ವಿದ್ಯಾ ಪಾಠಶಾಲೆಯ ಪದವಿಪೂರ್ವ ವಿಭಾಗದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ.*



**ಮಾ**ನವ ಕೇಂದ್ರಿತ ನಿಲುವಿಗೆ ಮಾನವೀಯತೆ ಎನ್ನುವರು. ಇದಕ್ಕೆ ಎರಡು ಮುಖ : ಮನುಷ್ಯರ ನಡುವಿನ ಆತ್ಮೀಯ ಬಾಂಧವ್ಯ ಹಾಗೂ ಮಾನವತೆ ಎಂದರೆ ಮಾನವ ಸಹಜ ಕ್ರಿಯೆ ಪ್ರತಿಕ್ರಿಯೆಗಳು. ಸಹನೆ, ಸಮಾನತೆ, ನಿಃಸ್ವಾರ್ಥತೆ, ಪರಸ್ಪರ ಗೌರವ ಮತ್ತು ಅನುಭೂತಿ ಮಾನವೀಯತೆಯ ಲಕ್ಷಣಗಳು. ಮಾನವೀಯತೆ ತೋರಿಸಿಕೊಳ್ಳುವ ರೀತಿ ನಿಃಸ್ವಾರ್ಥಪ್ರೀತಿ.

ಶ್ರೀಮಾತೆ ಶಾರದಾದೇವಿಯವರ ಜೀವನ ಚರಿತ್ರೆಯ ಹಲವು ಪ್ರಸಂಗಗಳಲ್ಲಿ ಅವರ ಮಾನವೀಯತೆ ನಮ್ಮ ಮನಸ್ಸನ್ನು ತಟ್ಟುತ್ತದೆ. ತುಂಬ ತುಂಬ ತುಂಟತನದಿಂದ ತನ್ನ ಮನೆಯವರಿಗೆ ಪೀಡೆಯಾಗಿದ್ದ ಹೆಣ್ಣು ಮಗುವನ್ನು ತಮ್ಮ ಪ್ರೀತಿಯಿಂದ ಪರಿವರ್ತಿಸಿದ ರೀತಿಯು ಮಾನವೀಯತೆಯ ಮೊದಲ ಪಾಠವಾಗಿದೆ. ತನ್ನ ತಾಯಿಯ ಜತೆ ಈ ಮಗು ಶ್ರೀಮಾತೆಯವರಲ್ಲಿಗೆ ಬರುತ್ತಿತ್ತು. ಶ್ರೀಮಾತೆಯವರು ಸಿಹಿತಿಂಡಿ ಕೊಟ್ಟು ಅದನ್ನು ಮುದ್ದಿಸುತ್ತಿದ್ದರು. ಒಮ್ಮೆ ಶ್ರೀಮಾತೆಯವರು ಜಯರಾಂಬಾಟಿಗೆ ಹೊರಟಿದ್ದಾಗ, ಈ ಮಗು ಬಂದಿತು. "ಮಗು, ನನ್ನ ಹತ್ತಿರ ತುಂಬ ದಿನಗಳಿಂದ ಬರುತ್ತಿದ್ದೀಯೆ. ನನ್ನನ್ನು ಪ್ರೀತಿಸುತ್ತಿದ್ದೀಯಾ?" ಎಂದು ಕೇಳಿದರು. "ಹೌದು, ತುಂಬಾ" ಎಂದಿತು ಮಗು. "ಎಷ್ಟು?" ಎಂದಾಗ ತನ್ನ ಪುಟ್ಟ ಕೈಗಳನ್ನು ಸಾಧ್ಯವಾದಷ್ಟೂ ಚಾಚಿ, "ಇಷ್ಟು" ಎಂದು ತೋರಿಸಿತು. ಶ್ರೀಮಾತೆಯವರು "ನಾನು ಜಯರಾಂಬಾಟಿಗೆ ಹೋದ ಮೇಲೂ ಪ್ರೀತಿಸುತ್ತೀಯಾ?" ಎಂದು ಕೇಳಿದಾಗ, "ಹೌದು, ಈಗಿನಂತೆಯೇ ಪ್ರೀತಿಸುತ್ತೇನೆ, ನಿನ್ನನ್ನು ಮರೆಯಲ್ಲ," ಎಂದಿತು. "ನನಗೆ ಅದು ಗೊತ್ತಾಗೋದು ಹೇಗೆ?" ಎಂದಾಗ, "ನಿನಗೆ ಗೊತ್ತಾಗಲು ನಾನೇನು ಮಾಡಬೇಕು?" ಎಂದು ಮರುಪ್ರಶ್ನೆ ಹಾಕಿತು. "ನೀನು ಮನೆಯಲ್ಲಿ ಎಲ್ಲರನ್ನೂ ಪ್ರೀತಿಸಿದರೆ, ನನ್ನನ್ನೂ ಪ್ರೀತಿಸುತ್ತೀ ಎಂದು ಗೊತ್ತಾಗುವುದು." ಆಗ ಮಗು, "ಸರಿ, ನಾನು ಅವರು ಎಲ್ಲರನ್ನೂ ಪ್ರೀತಿಸುತ್ತೇನೆ, ತುಂಟತನ ಮಾಡುವುದಿಲ್ಲ" ಎಂದು ಭರವಸೆ ಕೊಟ್ಟಿತು. "ಅದು ಒಳ್ಳೆಯದು, ಆದರೆ ನೀನು ಎಲ್ಲರನ್ನೂ ಸಮಾನವಾಗಿ ಪ್ರೀತಿಸುತ್ತೀ ಅಂತ ಹೇಗೆ ತಿಳಿಯೋದು?" ಎಂದಾಗ ಮಗು ಬೆರಗಾಗಿ, "ಎಲ್ಲರನ್ನೂ ಒಂದೇ ರೀತಿ ಪ್ರೀತಿಸುವುದು ಹೇಗೆ?" ಎಂದು ಕೇಳಿತು. ಶ್ರೀಮಾತೆಯವರು, "ಅದು ಹೇಗೆ ಎನ್ನುವುದನ್ನು ಹೇಳುತ್ತೇನೆ ಕೇಳು. ನೀನು ಯಾರನ್ನು ಪ್ರೀತಿಸುತ್ತೀಯೋ ಅವರಿಂದ ಏನನ್ನೂ ಕೇಳಬೇಡ. ನೀನು ಏನನ್ನಾದರೂ ಕೇಳಿದರೆ ಕೆಲವರು ಹೆಚ್ಚಿಗೆ ಕೆಲವರು ಕಡಮೆ ಕೊಡುತ್ತಾರೆ. ಆಗ ನೀನು ಯಾರು ಹೆಚ್ಚು ಕೊಡುವರೋ ಅವರನ್ನು ಹೆಚ್ಚು ಪ್ರೀತಿಸುತ್ತೀ; ಕಡಮೆ ಕೊಡುವವರನ್ನು ಕಡಮೆ ಪ್ರೀತಿಸುತ್ತೀ. ಹೀಗೆ ನಿನ್ನ ಪ್ರೀತಿ ಹೆಚ್ಚು ಕಡಮೆ ಆಗುತ್ತದೆ. ಎಲ್ಲರನ್ನೂ ಒಂದೇ ಬಗೆಯಲ್ಲಿ ಪ್ರೀತಿಸಲು ಆಗುವುದಿಲ್ಲ." ಆ ಹೆಣ್ಣು ಮಗು ಎಲ್ಲರನ್ನೂ ನಿರಪೇಕ್ಷೆಯಿಂದ ಪ್ರೀತಿಸುತ್ತೇನೆಂದು ಮಾತು ಕೊಟ್ಟಿತು. ಮುಂದೆ ಆ ಮಗುವಿನ ವರ್ತನೆಯಲ್ಲಿ ಅದ್ಭುತ ಬದಲಾವಣೆಗಳು ಆದುವಂತೆ. ಮನಸ್ಸನ್ನು ಹಿಡಿದು ನಿಲ್ಲಿಸಿ, ಕರಗಿಸಿ, ತಿರುಗಿಸುವ ಶಕ್ತಿ ಶ್ರೀಮಾತೆಯವರ ನುಡಿಯಲ್ಲಿತ್ತು.

ಮಾನವ ಸಂಬಂಧಗಳ ನೆಲೆಗಟ್ಟು ನಾಲಿಗೆಯ ಮೇಲಿನ ನಿಯಂತ್ರಣದಲ್ಲಿದೆ. ನುಡಿ ಕಠೋರ, ಆದರೆ ಹೃದಯ ಮೃದು ಎಂದು ಕೆಲವರನ್ನು ವರ್ಣಿಸುತ್ತಾರೆ. ಆದರೆ ಇದು ಪೂರ್ತಿ

ಸರಿಯಲ್ಲ. ಬುದ್ಧಿ ಬೆಳೆದಿರದ ಎಳೆಯ ಮಕ್ಕಳಿಗೆ ಮಾತ್ರ ಶ್ರೀಮಾತೆಯವರು 'ಹೀಗೆ ಮಾಡು' ಎಂದು ಹೇಳುತ್ತಿದ್ದರಂತೆ. ಉಳಿದ ಎಲ್ಲರಿಗೂ, 'ಹೀಗೆ ಮಾಡಿದರೆ ಚೆನ್ನಾಗಿರುತ್ತದಲ್ಲವೆ' ಎಂದೇ ಹೇಳುತ್ತಿದ್ದರು. ಅವರ ವರ್ತನೆಯ ನಯ ವಿನಯ, ಭಾಷಾಮಾಧುರ್ಯ ಅವರ ಈ ಮಾತುಗಳಿಂದ ನಮಗೆ ತಿಳಿಯುವುದು: "ಇತರರ ಮನಸ್ಸಿಗೆ ನೋವಾಗುವಂತಹ ಮಾತನ್ನು ಆಡಲೇಬಾರದು. ಸತ್ಯವೇ ಆದರೂ ಅಪ್ರಿಯ ಸತ್ಯವನ್ನು ಹೇಳಬಾರದು. ಏಕೆಂದರೆ ಹಾಗೆ ಮಾಡಿದರೆ ಅದೇ ಅಭ್ಯಾಸವಾಗಿ ಬಿಡುವುದು. ಮನುಷ್ಯನಿಗೆ ತನ್ನ ಮಾತಿನ ಮೇಲೆ ಹಿಡಿತವಿಲ್ಲದಿದ್ದರೆ ಅವನು ತನ್ನ ಸೂಕ್ಷ್ಮತೆಯನ್ನು ಕಳೆದುಕೊಳ್ಳುವನು. ಇತರರ ಭಾವನೆಗೆ ಸೂಕ್ಷ್ಮವಾದ ಗಮನ ಕೊಡದವನು ಏನು ಮಾಡುವುದಕ್ಕೂ ಹಿಂಜರಿಯುವುದಿಲ್ಲ. ಠಾಕೂರರು ಹೇಳುತ್ತಿದ್ದರು, 'ಕುಂಟನನ್ನು ಹೇಗೆ ಕುಂಟನಾದೆ ಎಂದು ಕೇಳಬೇಕಾದರೆ, "ನಿನ್ನ ಕಾಲು ಆ ಸ್ಥಿತಿಗೆ ಹೇಗೆ ಬಂತು?"ಎಂದು ಕೇಳಬೇಕು' ಎಂದು."

**ದಯೆಯಿಲ್ಲದ ವ್ಯಕ್ತಿಯನ್ನು ಮಾನವ ಎಂದು ಕರೆಯಲಾದೀತೆ? —*ಶ್ರೀಶಾರದಾದೇವಿ***

ಶ್ರೀಮಾತೆಯವರದು ಕೋಮಲ ಸ್ವಭಾವ. ಎಲ್ಲ ಸಂದರ್ಭಗಳಲ್ಲೂ ಇತರರಲ್ಲಿಯ ಒಳ್ಳೆಯದನ್ನೇ ಹುಡುಕಿ ನೋಡುವರು. ದುರ್ಗುಣ, ದುಃಖಕ್ಕೆ ಎಡೆನೀಡುವ ರೀತಿನೀತಿಗಳು ಎಲ್ಲರಲ್ಲಿಯೂ ಇರುವುದು ಸಹಜ, ನಮಗೆಲ್ಲ ಪರರಲ್ಲಿನ ದೋಷಗಳೇ ಎದ್ದು ತೋರಿ, ಮಾತಿನ ಬಹುಭಾಗ ಇತರರ ವಿಮರ್ಶೆಯೇ ಆಗಿರುತ್ತದೆ. ಆದರೆ ಶ್ರೀಮಾತೆಯವರು ಎದ್ದು ಕಾಣುವ ವಿಕಾರಗಳ ನಡುವೆಯೇ ಅಲ್ಪಗುಣವನ್ನು ಕುತೂಹಲದಿಂದ ಗಮನಿಸಿ, ಅದನ್ನೇ ದೊಡ್ಡದು ಮಾಡಿ ಹೇಳುವರು. ಕಲಕತ್ತೆಯಲ್ಲಿ ಶ್ರೀಮಾತೆಯವರ ಮನೆಯ ಮುಂದೆ ಒಬ್ಬ ವ್ಯಕ್ತಿ ಇದ್ದ. ಆತನ ಉಪಪತ್ನಿಗೆ ಕಠಿಣ ರೋಗ ಬಂದಿತ್ತು. ಆತ ಅವಳ ಶುಶ್ರೂಷೆಯನ್ನು ನಿಷ್ಠೆಯಿಂದ ಮಾಡಿದುದನ್ನು ಗಮನಿಸಿ, ಶ್ರೀಮಾತೆಯವರು ಮಹಿಳೆಯೊಬ್ಬಳಿಗೆ ಹೇಳಿದರು : "ಎಷ್ಟು ಸೇವೆ ಮಾಡಿದ! ಇಂತಹ ನಿಷ್ಠೆಯನ್ನು ನಾನೆಲ್ಲೂ ನೋಡಲಿಲ್ಲ. ಇದನ್ನೇ ಸೇವೆ ಎನ್ನುವುದು, ಇದನ್ನೇ ಪ್ರೀತಿ ಎನ್ನುವುದು." ಈ ಮಾತನ್ನು ಕೇಳಿದ ಮಹಿಳೆ ಮಾತನಾಡದೆ ಸುಮ್ಮನಾದಳು. ಉಪಪತ್ನಿಯನ್ನು ಇಟ್ಟುಕೊಂಡದ್ದು ಮಾತ್ರವಲ್ಲದೆ ಅವಳ ಸೇವೆ ಬೇರೆ ಎಂದು ಮನಸ್ಸಿನಲ್ಲೇ ಅಂದುಕೊಂಡಿರಬೇಕು. ಶ್ರೀಮಾತೆಯವರ ಈ ಔದಾರ್ಯವನ್ನು ಮೆಚ್ಚುವುದು ಅಷ್ಟು ಸುಲಭವೆ?

ಮಾನವೀಯತೆಗೆ ಮನಸ್ಸೇ ಮೂಲ. ಮಾತು ಮತ್ತು ವ್ಯವಹಾರ ಬುದ್ಧಿಯಿಂದ ಮೂಡದೆ, ಸರಳವಾಗಿ ಹೃದಯದಿಂದ, ಆಳ ಮನಸ್ಸಿನಿಂದ ಮೂಡಬೇಕು. ಆಗ ವ್ಯಕ್ತಿ ವ್ಯಕ್ತಿಗಳ ನಡುವೆ ಪ್ರತಿಷ್ಠೆಯ ತಾಕಲಾಟ ನಡೆಯದೆ, ಹೃದಯ ಸಂವಾದ ಸಾಧ್ಯವಾಗಿ, ಮಾನವೀಯ ಸಂಬಂಧ ಸ್ಥಾಪಿತವಾಗುವುದು. ನಿವೇದಿತಾ ಶ್ರೀಮಾತೆಯವರನ್ನು ಕುರಿತು ಹೀಗೆನ್ನುತ್ತಾಳೆ: "ಅವರಲ್ಲಿ ಕಾಣುತ್ತಿದ್ದ ಜ್ಞಾನ ಮತ್ತು ಮಾಧುರ್ಯ ಅತ್ಯಂತ ಸರಳ ಸ್ತ್ರೀಯರಿಗೆ ಮಾತ್ರ ದಕ್ಕುವಂತಹುದು. ಆದರೂ ನನ್ನ ದೃಷ್ಟಿಯಲ್ಲಿ ಅವರ ಸೌಜನ್ಯದಲ್ಲಿ ಕಂಡುಬರುತ್ತಿದ್ದ ಅಪೂರ್ವ ಗಾಂಭೀರ್ಯ ಮತ್ತು ತೆರೆದ ಮನಸ್ಸಿನಿಂದ ಇತರರ ಭಾವವನ್ನು ಗ್ರಹಿಸುವ ಸಾಮರ್ಥ್ಯ ಅವರ ಸಾಧುತ್ವದಷ್ಟೆ ಅಮೋಘವಾದುವು. ಅವರಿಗೆ ಎಷ್ಟೇ ಕಠಿನವಾದ ಅಥವಾ ನೂತನವಾದ ಪ್ರಶ್ನೆಯನ್ನು ಹಾಕಿದರೂ, ಅವರು ತಮ್ಮ ಉದಾರವಾದ ಯುಕ್ತಿಯುಕ್ತವಾದ ನಿರ್ಣಯವನ್ನು ನೀಡಲು ಎಂದೂ ಮೀನಮೇಷ ಮಾಡಿದವರಲ್ಲ. ಅವರಿಗೆ ತಿಳಿಯದ ಯಾವುದೋ ಸಮಾಜ ವಿಪ್ಲವದಿಂದ ಪೀಡಿತನಾದ ಅಥವಾ ಸಂಭ್ರಾಂತನಾದ ವ್ಯಕ್ತಿ ಅವರ ಹತ್ತಿರ ಬಂದಾಗ, ತಮ್ಮ ದೋಷರಹಿತ ಅಂತರ್ದೃಷ್ಟಿಯಿಂದ ವಿಷಯದ ಒಳಗನ್ನು ಹೊಕ್ಕು ಆ ಸಮಸ್ಯೆಯ ಬಗೆಗಿನ ಅವನ ದೃಷ್ಟಿಕೋನವನ್ನೇ ಬದಲಾಯಿಸುತ್ತಿದ್ದರು."

ಇತರರಿಗಿಂತ ತಾವು ಮೇಲು ಎಂದು ಸಾಧಿಸುವ ಬಯಕೆ, ದೋಷಗಳನ್ನು ಹುಡುಕುವುದು, ಪ್ರತಿಕ್ಷಣವೂ ಇತರರನ್ನು ತಮ್ಮ ನೇರಕ್ಕೇ ತಿದ್ದಲು ಪ್ರಯತ್ನಿಸುವುದು ಮಾನವರ ಅಂತರಾಳದಲ್ಲಿ ಅಡಗಿದ ಮಾನವೀಯತೆಯನ್ನು ಅಭಿವ್ಯಕ್ತಗೊಳಿಸಲು ಅಡ್ಡಿಯನ್ನುಂಟುಮಾಡುತ್ತವೆ. ತಮ್ಮನ್ನು ತಾವೇ ಪರಾಮರ್ಶಿಸಿಕೊಳ್ಳದಿರುವ ಅಂಶವೂ ಒಂದು ಅಡ್ಡಿಯೇ.

ಹಳ್ಳಿಯಲ್ಲಿ ಇರುವಾಗ ಶ್ರೀಮಾತೆಯವರು ಜಾತಿ ಕಟ್ಟಳೆಗಳಿಗೆ ಮಾನ್ಯತೆ ನೀಡುತ್ತಿದ್ದರು. ಒಮ್ಮೆ ಅಸ್ಪೃಶ್ಯನೊಬ್ಬ ಮಂತ್ರದೀಕ್ಷೆಗೆ ಬೇಡಿದಾಗ, ಸಮ್ಮತಿಸಲಿಲ್ಲ. ಆಗ ಅವನು ಕೋಪದಿಂದ ಉದ್ರೇಕಗೊಂಡು, "ನೀವು ಅಂದು ರಾತ್ರಿ ಏಕಾಂಗಿಯಾಗಿ ಹೋಗುತ್ತಿರುವಾಗ ದರೋಡೆಕೋರ ಒಬ್ಬನನ್ನು ಸಂಧಿಸಿದುದು ನೆನಪಿದೆಯೇ? ಅವನೂ ಒಬ್ಬ ಅಸ್ಪೃಶ್ಯ. ಭಯದಿಂದ ಅಂದು ಅವನನ್ನು ತಂದೆ ಎಂದು ಕರೆದಿರಿ. ಇಂದು ಇನ್ನೊಬ್ಬ ಅಸ್ಪೃಶ್ಯನಿಗೆ ತಾಯಿಯಾಗಲು ನಿರಾಕರಿಸುತ್ತಿರುವಿರಿ" ಎಂದ. ಶ್ರೀಮಾತೆಯವರು ಗಹಗಹಿಸಿ ನಕ್ಕರು. ಜಾತಿ ನಿಯಮವನ್ನು ಕಡೆಗಣಿಸಿ ಅನುಕಂಪದಿಂದ ಅವನಿಗೆ ದೀಕ್ಷೆ ನೀಡಿದರು. ಕ್ರಮೇಣ ಹಳ್ಳಿಗರಿಗೂ ಭಕ್ತರದೇ ಒಂದು ಶ್ರೇಣಿ ಎಂದು ಅರ್ಥವಾಯಿತು.

೧೮೯೮ರಲ್ಲಿ ಕಾಶ್ಮೀರ ಪ್ರವಾಸದಿಂದ ಹಿಂದಿರುಗಿದ ಸ್ವಾಮಿ ವಿವೇಕಾನಂದರು ಶ್ರೀಮಾತೆಯವರನ್ನು ನೋಡಲು ಬಂದರು. ಒಬ್ಬ ಫಕೀರ ಸ್ವಾಮೀಜಿಯವರು ತನ್ನ ಶಿಷ್ಯನನ್ನು ಸೆಳೆಯಬಹುದೆಂಬ ಅಸೂಯೆಯಿಂದ ತಮಗೆ ಉದರಬೇನೆ ಉಂಟಾಗಿ ಮೂರು ದಿನದೊಳಗೆ ಜಾಗ ಖಾಲಿ ಮಾಡುವಿ ಎಂದು ಶಾಪ ಕೊಟ್ಟದ್ದು, ಅದು ಫಲಿಸಿದ್ದನ್ನು ಹೇಳಿದರು. ಚಿಕ್ಕ ಮಗುವಿನಂತೆ "ನಿಮ್ಮ ಠಾಕೂರರಿಗೆ ಏನೂ ಮಾಡಲಾಗಲಿಲ್ಲ" ಎಂದು ದೂರಿದರು. ಆಗ ಶ್ರೀಮಾತೆಯವರು ಹೇಳಿದ ಮಾತು ಗಮನಾರ್ಹ: "ಅದೂ ಒಂದು ವಿದ್ಯೆ. ಅದನ್ನೂ ಗೌರವಿಸಬೇಕು. ಠಾಕೂರರಂತೂ ಹಲ್ಲಿ ಶಕುನ, ಸೀನು ಇಂತಹ ಸಾಮಾನ್ಯ ವಿಷಯ

ಗಳಿಗೂ ಮಾನ್ಯತೆ ಇತ್ತರು. ಅವರು ಯಾವುದನ್ನೂ ನಾಶ ಮಾಡಲು ಬರಲಿಲ್ಲ." ಶ್ರೀಮಾತೆಯವರೂ ತಮ್ಮ ಜೀವನದಲ್ಲಿ ಯಾರ ಭಾವವನ್ನೂ ನಷ್ಟಗೊಳಿಸದೆ, ತಮ್ಮ ನೇರಕ್ಕೇ ತಿದ್ದಲು ಬಯಸದೆ, ಎಲ್ಲರೂ ತಮ್ಮ ನಡತೆಯಿಂದಲೆ ಪ್ರಭಾವಿತಗೊಂಡು ಉನ್ನತಿಗೆ ಏರಲು ಪ್ರಯತ್ನಿಸುವಂತೆ ಮಾಡುತ್ತಿದ್ದರು. ಗುರು ವಿನಂತೆ ನಡೆದುಕೊಳ್ಳುವ ಬದಲು ಹಳ್ಳಿಯ ಸರಳ ಸಾಮಾನ್ಯ ತಾಯಿಯಂತೆಯೇ ಇರುತ್ತಿದ್ದರು. ಹೀಗಾಗಿ, ಸಾಮಾನ್ಯರೂ ಅವರೊಡನೆ ನಿರ್ಭಿಡೆಯಿಂದ ಒಡನಾಡುವಂತಾಯಿತು.

> ಯಾವುದೋ ಸನ್ನಿವೇಶದ ಸ್ಫೂರ್ತಿಯಿಂದ ಶ್ರೇಷ್ಠವಾದು ದನ್ನು ಸಾಧಿಸುವವರಿದ್ದಾರೆ. ಆದರೆ ಪ್ರತಿಯೊಂದು ಕರ್ತವ್ಯ ವನ್ನೂ ಅದರ ಸಣ್ಣಪುಟ್ಟ ವಿವರಣೆಗಳಿಗೂ ಗಮನ ಕೊಟ್ಟು ನೆರವೇರಿಸುವವನೇ ಶ್ರೇಷ್ಠ. —ಶ್ರೀಶಾರದಾದೇವಿ.

ಶ್ರೀಮಾತೆಯವರ ಮಾನವತೆ ಅವರ ಕಾರ್ಯತತ್ಪರತೆಯಲ್ಲಿ ಇದೆ; ಇತರರಿಗೂ ಸದಾ ಕಾರ್ಯಮಗ್ನರಾಗಿರಲು ಹೇಳು ತ್ತಿದ್ದರು. ಕೆಲಸದಾಳುಗಳ ಕೊರತೆ ಇಲ್ಲದಿದ್ದಾಗಲೂ ವೃದ್ಧ ಶರೀರದ ಅಸ್ವಸ್ಥತೆಯಲ್ಲೂ ಮಧ್ಯಾಹ್ನ ಚಪಾತಿ ಹಿಟ್ಟು ಕಲೆಸು ವುದನ್ನು ನೋಡಿ ಬ್ರಹ್ಮಚಾರಿ ಗೋಪೇಶ್ ಬೆರಗಾದನಂತೆ. ಅವ ರನ್ನೇ ಇಷ್ಟೊಂದು ಪರಿಶ್ರಮದ ಆವಶ್ಯಕತೆಯಾದರೂ ಏನು ಎಂದು ಕೇಳಿದನು. ಅದಕ್ಕೆ ಶ್ರೀಮಾತೆ, "ಕೆಲಸ ಮಾಡುವುದೇ ಒಳ್ಳೆಯದು" ಎಂದು ಹೇಳಿ, ಸ್ವಲ್ಪ ಹೊತ್ತು ಬಿಟ್ಟು, "ಬದುಕಿರು ವವರೆಗೂ ಕೆಲಸ ಮಾಡಿಕೊಂಡೇ ಇರುವಂತಾಗಲಿ ಎಂದು ಠಾಕೂರರು ಆಶೀರ್ವದಿಸಲಿ" ಎಂದು ಗಂಭೀರವಾಗಿ ಹೇಳಿ ದರಂತೆ. ಬಯಸಿದ ಕೆಲಸವನ್ನು ಮಾತ್ರ ಮಾಡದೆ ಕೈಗೆ ಬಂದ ಕೆಲಸವನ್ನು ಮೇಲು ಕೀಳೆಂದು ತಾರತಮ್ಯ ಮಾಡದೆ ಸಂತೋಷ ದಿಂದ ಮಾಡುವ ಸ್ವಭಾವ ಅವರದು. ಬೇರೆಯವರಿದ್ದರೂ ಯಾರ ಸಹಾಯವನ್ನೂ ನಿರೀಕ್ಷಿಸುತ್ತಿರಲಿಲ್ಲ.

ದೋಷದ ಬಗ್ಗೆ ಶ್ರೀಮಾತೆಯವರ ಮಾತು ತುಂಬ ಪ್ರಸಿದ್ಧ. ತಾವು ಜೀವನದ ಉದ್ದಕ್ಕೂ ಅನುಸರಿಸಿದ ಹಾದಿಯನ್ನು ಜೀವಿತದ ಕೊಟ್ಟಕೊನೆಯ ಈ ಮಾತುಗಳಲ್ಲಿ ನಿಚ್ಚಳವಾಗಿ ತೋರಿದ್ದಾರೆ. "ಅಮ್ಮ, ಮುಂದೆ ನಮ್ಮ ಗತಿ ಏನು?" ಎಂದಾಗ, ಅಪಾರ ಕರುಣೆಯಿಂದ ಭರವಸೆ ಇತ್ತು, "ಆದರೆ ಒಂದು ವಿಷಯ—ನಿನಗೆ ಶಾಂತಿ ಬೇಕಾದರೆ ಯಾರ ದೋಷವನ್ನೂ ನೋಡಬೇಡ. ನಿನ್ನ ದೋಷವನ್ನೇ ನೋಡಬೇಕು. ಪ್ರಪಂಚದ ಎಲ್ಲರನ್ನೂ ನಿನ್ನವರೆಂದು ಭಾವಿಸಲು ಪ್ರಯತ್ನಿಸು. ಯಾರೂ ಪರರಲ್ಲಮ್ಮ. ಎಲ್ಲರೂ ನಿನ್ನವರೆ." ನಮ್ಮನ್ನು ನಾವು ಪರಾ ಮರ್ಶಿಸಿಕೊಳ್ಳಬಹುದಾದ ಒಂದು ದಾರಿ ಇಲ್ಲಿದೆ. ನಮ್ಮಲ್ಲಿ ಇದ್ದು, ನಾವು ಗಮನಿಸದೆ ಹೋದ ಅಥವಾ ಅರಿಯದೆ ಇರುವ ದೋಷಗಳನ್ನೇ ನಾವು ಪರರಲ್ಲಿ ನೋಡುವುದು. ಹೀಗೆ ಇನ್ನೊಬ್ಬರಲ್ಲಿ ನಾವು ಕಾಣುವ ದೋಷಗಳು ಅವು ನಮ್ಮಲ್ಲೇ ಇವೆ ಎನ್ನುವುದರ ಸೂಚಿ. ಇದನ್ನು ಅರಿತಾಗಲೇ ನಮಗೆ ಶಾಂತಿಯ ಅನುಭವವಾಗುತ್ತದೆ, ಅಂತಸ್ಸತ್ವ ಒರತೆಯಾಗಿ ಹರಿದು ಜೀವನೋತ್ಸಾಹ ಹೊಮ್ಮುತ್ತದೆ, ನಮ್ಮ ನಡ ವಳಿಕೆಯಲ್ಲಿ ಒಂದು ಮಾಧುರ್ಯ, ಬೆಳಕು, ಸ್ನೇಹಭಾವ ಮೂಡುತ್ತದೆ. ಇದು ಶ್ರೀಮಾತೆಯವರು ತೋರಿದ ಮಾನ ವೀಯತೆಯ ಮಹಾಮಾರ್ಗವಲ್ಲದೆ ಮತ್ತೇನು?

❖

## ಆನಂದಮಯೀ ಶ್ರೀಮಾತೆ

ಶ್ರೀಮಾತೆಯವರು ಇನ್ನೊಬ್ಬರನ್ನು ಗೇಲಿಮಾಡಿ ಆ ಆನಂದದಲ್ಲಿ ಎಂದೂ ಭಾಗಿಗಳಾಗುವವರಲ್ಲ. ಯಾರಾದರೂ ಗೇಲಿ ಮಾಡಲ್ಪಟ್ಟರೆ ಅವರ ಮೇಲೆ ಸಹಾನುಭೂತಿಯನ್ನು ತೋರಿಸುತ್ತಿದ್ದರು. ಒಮ್ಮೆ ಜಯರಾಂಬಾಟಿಯಲ್ಲಿದ್ದಾಗ ರಾಂಚಿಯಿಂದ ಭಕ್ತರು ಅನೇಕ ಹಣ್ಣುಹಂಪಲುಗಳನ್ನು ಕಳಿಸಿದ್ದರು. ಶ್ರೀಮಾತೆಯವರ ದೂರದ ಸಂಬಂಧಿ ವಿಧವೆ ಭಾವಿನೀದೇವಿ ಅಲ್ಲಿದ್ದಳು. ಅವಳ ತಾಯಿಗೆ ಮೈಸರಿಯಿರಲಿಲ್ಲ. ಅವಳಿಗಾಗಿ ಎರಡು ದಾಳಿಂಬೆ ಹಣ್ಣನ್ನು ಮೊದಲೇ ಭಾವಿನೀದೇವಿಗೆ ಕೊಟ್ಟಿದ್ದರು ಶ್ರೀಮಾತೆಯವರು. ಈಗ ರಾಂಚಿಯಿಂದ ಬಂದ ಹಣ್ಣನ್ನು ನೋಡಿ ಇನ್ನಷ್ಟು ದಾಳಿಂಬೆ ಹಣ್ಣು ಸಿಕ್ಕಿದರೆ ಚೆನ್ನಾಗಿತ್ತು ಅನಿಸಿತು ಭಾವಿನಿಗೆ. ಆಕೆ ದೀರ್ಘ ನಿಃಶ್ವಾಸ ಬಿಟ್ಟು ಹೇಳಿದಳು : "ಆಹಾ, ಪರಮಹಂಸರಿಗೆ ನನ್ನನ್ನೇ ಕೊಟ್ಟು ಮದುವೆ ಮಾಡುವ ಮಾತಾಗಿತ್ತು ಮೊದಲು. ಅವರು ಹುಚ್ಚರೆಂದು ಭಾವಿಸಿ ತಂದೆ ನನ್ನನ್ನು ಅವರಿಗೆ ಕೊಡಲಿಲ್ಲ. ಅವರನ್ನೇ ವಿವಾಹವಾಗಿದ್ದರೆ ಈ ಎಲ್ಲವೂ ನನ್ನ ಮನೆಗೇ ಬರುತ್ತಿದ್ದವು." ಇದನ್ನು ಕೇಳಿ ಅಲ್ಲಿದ್ದವರೆಲ್ಲ ಗಟ್ಟಿಯಾಗಿ ನಕ್ಕರು. ಶ್ರೀಮಾತೆಯವರೂ ಕಿರುನಗೆಯನ್ನು ಬೀರಿ ಸಹಾನು ಭೂತಿಯಿಂದ ಹೇಳಿದರು: "ಹಾಗಾದರೆ ತೆಗೆದುಕೊ, ಏನು ಬೇಕೊ ಎಲ್ಲ ತೆಗೆದುಕೊ," ಠಾಕುರರಿಗೆ ಸ್ವಲ್ಪ ಇರಿಸಿ ಉಳಿದುದನ್ನೆಲ್ಲ ಅವಳಿಗೆ ಕೊಡಬೇಕೆಂದು ಸೇವಕರಿಗೆ ಆದೇಶವಿತ್ತು, ಮತ್ತೆ ಭಾವಿನಿಗೆ ಹೇಳಿದರು : "ನೋಡು, ನಿನ್ನ ತಾಯಿಗೆ ಪರಂಗಿಹಣ್ಣು ಕೊಡ ಬೇಡ, ಅವಳಿಗೆ ಅದು ಒಳ್ಳೆಯದಲ್ಲ."

ಜನರೆಲ್ಲರನ್ನೂ ಅವರು ಪ್ರೀತಿಸಿದರು. ಆ ಪ್ರೀತಿಯನ್ನು ಯಾರೂ ಮರೆಯಲಾರರು. ಹೆಂಗಸೊಬ್ಬಳು ಶ್ರೀಮಾತೆಯವರ ಮನೆಗೆ ಬಂದು ತರಕಾರಿ ಹೆಚ್ಚುತ್ತಿದ್ದಳು. ಶ್ರೀಮಾತೆಯವರು ತೀರಿಹೋದಮೇಲೂ ಆಕೆ ಆಗಾಗ ಬಂದು ಸ್ವಲ್ಪ ಹೊತ್ತು ಇದ್ದು ಹೋಗು ತ್ತಿದ್ದಳು. "ಈಗಲೂ ನೀನು ಏಕೆ ಬರುತ್ತಿರುವೆ?" ಎಂದು ಕೇಳಿದಾಗ ಅವಳೆಂದಳು: "ಆ ಮಾತೆಯವರ ದಯೆಯನ್ನು ನಾನು ಹೇಗೆ ಮರೆಯಲಿ? ಆದ್ದರಿಂದಲೆ ಇಲ್ಲಿ ಬಂದು ಸ್ವಲ್ಪ ಹೊತ್ತು ಇದ್ದಾಗ ಮನಸ್ಸಿಗೆ ಎಷ್ಟೋ ಆನಂದವಾಗುವುದು." ✳